

# ಮಕ್ಕಳಾಟದ ಸುತ್ತ...

**ಮಕ್ಕಳಾಟದ ಮೋಜಿನ ಅಂಚಿನಲ್ಲಿಯೇ ಸಂಚು ಹೂಡಿ ಕೂತಿರುವ ಅಪಾಯವನ್ನೂ ಕಾಣಿಸುವ ಕಿರುಚಿತ್ರವಿದು.**

■ ಗೌರಿ

ಬಾಲ್ಯವನ್ನು ಮನುಷ್ಯನ ಬದುಕಿನ ‘ಚಿನ್ನದ ಕಾಲ’ ಎಂದು ಗುರ್ತಿಸುತ್ತಾರೆ. ಮಕ್ಕಳಿದ್ದಾಗ ಆಡಿದ ಆಟ, ಆಗಿನ ಮುಗ್ಧತೆ, ತುಂಟಾಟಗಳೆಲ್ಲವನ್ನೂ ನಾವು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಿರುತ್ತೇವೆ. ಯಾರದ್ದೋ ತೋಟದಲ್ಲಿ ಎಳನೀರು ಕದ್ದಿದ್ದು, ಇನ್ಯಾರದ್ದೋ ವಾಹನವನ್ನು ಪಂಕ್ಚರ್ ಮಾಡಿದ್ದು, ಬಾವಿಯಲ್ಲಿ ಈಜಿದ್ದು, ಈಜುತ್ತಲೇ ಮುಳುಗಿ ಹೇಗೋ ಎದ್ದುಬಂದಿದ್ದು... ಹೀಗೆ ಕೆಲವು ನೆನಪುಗಳು ಎಲ್ಲರ ಬಾಲ್ಯದ ಭಾಗವೂ ಆಗಿರುತ್ತವೆ. ಆದರೆ ಈ ನೆನಪುಗಳು ನೆನಪುಗಳಾಗಿದ್ದಾಗಷ್ಟೇ ಮುದ ನೀಡುವಂಥವು; ಅದನ್ನು ಅನುಭವಿಸುವಾಗಲ್ಲ. ಬಾಲ್ಯದ ತುಂಟಾಟಗಳು ಎಷ್ಟು ರಂಜನೀಯವೋ ಅಷ್ಟೇ ಅಪಾಯಕಾರಿಯೂ ಆಗಬಲ್ಲವು. ಹಾಗಾಗಿಯೇ ನಮ್ಮೆಲ್ಲರಿಗೂ ಬಾಲ್ಯದಲ್ಲಿ ನದಿಯಲ್ಲಿ ಈಜಲು ಹೋಗಿ ತೀರಿಹೋದ, ಸೈಕಲ್ ಹೊಡೆಯುತ್ತ ಅಪಘಾತದಲ್ಲಿ ಅಸುನೀಗಿದ, ಇದ್ದಕ್ಕಿದ್ದಂತೆ ಕಾಣೆಯಾಗಿಹೋದ ಸ್ನೇಹಿತ/ತೆಯರ ವಿಷಾದದ ನೆನಪೂ ಇರುತ್ತದಲ್ಲವೇ? ನೆನಪುಗಳ ಸಂಚಿಯಲ್ಲಿರುವ ಈ ಸಾಹಸ ಮತ್ತು ವಿಷಾದದ ನೆನಪುಗಳಿಗೆ ಇರುವ ಅಂತರ ತೀರಾ ಚಿಕ್ಕದು.

‘ಡ್ರೈಯರ್’ ಕಿರುಚಿತ್ರ ಆ ಅಂತರವನ್ನು ಬೆಚ್ಚಿಬೀಳಿಸುವ ಹಾಗೆ ಅನುಭಕ್ಕೆ ತಂದುಕೊಡುತ್ತದೆ. ಸಾಂಪ್ರದಾಯಿಕ ಮುಕ್ತಾಯದ ಮೊರೆಹೋಗಿದ್ದರೆ ಒಂದು ದುರಂತ ಕತೆಯಾಗಿಬಿಡುತ್ತಿದ್ದ ಈ ಕಿರುಚಿತ್ರ, ದುರಂತದ ಮೊರೆ ಹೋಗದೆ ಅದರ ಅನುಭವವನ್ನು ನಮಗೆ ದಾಟಿಸುತ್ತದೆ.

ಒಂದು ನಿರ್ಜನ ಮನೆಯ ಬಾಗಿಲನ್ನು ತೆಗೆದು ಮಕ್ಕಳ ಗುಂಪೊಂದು ಒಂದು ಮನೆಯೊಳಗೆ ನುಗ್ಗುತ್ತದೆ. ಅಲ್ಲಿ ಆಟವಾಡುತ್ತ, ಆ ಗುಂಪಿನ ಪುಟಾಣಿಯೊಬ್ಬಳನ್ನು ಡ್ರೈಯರ್‌ನಲ್ಲಿ ಹಾಕಿ ಬಾಗಿಲು ಹಾಕಿ ಆಟ ಆಡುವುದೆಂದು ನಿರ್ಧರಿಸುತ್ತಾರೆ. ಹಾಗೆ ಪುಟಾಣಿಯನ್ನು ಡ್ರೈಯರ್ ಒಳಗೆ ಹಾಕಿ ಬಾಗಿಲಹಾಕಿ ಅದನ್ನು ತಿರುಗುವಂತೆ ಮಾಡಿ ಹೊರಗಿನಿಂದ ಎಲ್ಲ ಮಕ್ಕಳೂ ಸೇರಿ ಹಾಡು ಹೇಳುತ್ತಾರೆ. ಒಳಗಿನಿಂದ ಪುಟಾಣಿ ಬಾಗಿಲು ತೆಗೆಯಲು ಯತ್ನಿಸಿದ ಹಾಗೂ ಹೊರಗಿನಿಂದ ಬಾಗಿಲು ಒದ್ದು ಹಾಕುತ್ತಾರೆ. ಹೀಗೆ ಒದ್ದು ಒದ್ದು ಬಾಗಿಲು ತೆಗೆಯಲೇ ಸಾಧ್ಯವಿಲ್ಲದ ಹಾಗೆ ಆಗುತ್ತದೆ. ಒಳಗಿನ ಪುಟಾಣಿಯ ಧ್ವನಿ ನಿಂತುಹೋಗುತ್ತದೆ. ಭಯದಿಂದ ಮಕ್ಕಳು ಬಾಗಿಲು ತೆರೆಯಲು ಯತ್ನಿಸಿದರೆ ಬಾಗಿಲು ತೆರೆಯಲೇ ಬರುವುದಿಲ್ಲ.

ಅದುವರೆಗೆ ಮೋಜಿನಲ್ಲಿದ್ದ ಮಕ್ಕಳೆಲ್ಲ ಒಮ್ಮಿಂದೊಮ್ಮೆಲೇ ಗಾಬರಿಯಾಗುತ್ತಾರೆ. ಅದೇ ಸಮಯಕ್ಕೆ ಸರಿಯಾಗಿ ಮನೆಯೊಳಗೆ ಯಾರೋ ಬರುತ್ತಾರೆ. ಅಲ್ಲಲ್ಲೇ ಮಕ್ಕಳು ಅಡಗಿಕೊಳ್ಳುತ್ತಾರೆ. ಒಬ್ಬಳು ಹೆಂಗಸು ಅಲ್ಲಿಗೆ ಬಂದು ಫೋನಲ್ಲಿ ಮಾತಾಡುತ್ತ ಡ್ರೈಯರ್ ಬಾಗಿಲು ತೆರೆದು ಒಳಗಿದ್ದ ಬಟ್ಟೆಯನ್ನು ತೆಗೆದುಕೊಂಡು ಹೋಗುತ್ತಾಳೆ. ಅವಳಿಗೂ ಒಳಗೆ ಮಗು ಇರುವುದು ತಿಳಿಯುವುದಿಲ್ಲ.

ಈ ಕಿರುಚಿತ್ರದ ಶಕ್ತಿ ಇರುವುದೇ ಈ ಸನ್ನಿವೇಶದಲ್ಲಿ. ಮಗುವೊಂದು ಡ್ರೈಯರ್ ಒಳಗೆ ಹೋಗುವ ಮತ್ತು ಅಲ್ಲಿ ಅದಕ್ಕೆ ಎದುರಾಗುವ ಅಪಾಯವನ್ನು ನಮ್ಮ ಮೈ ನವಿರೇಳುವಂತೆ ಹಿಡಿದಿಡುತ್ತಾರೆ ನಿರ್ದೇಶಕರು. ಮಕ್ಕಳ ಜೊತೆಗೆ ನಮ್ಮ ಹೃದಯವೂ ಹೊಡೆದುಕೊಳ್ಳಲಾರಂಭಿಸುತ್ತದೆ. ಈ ಉದ್ವೇಗವೇ ಮಕ್ಕಳ ಆಟಗಳ ಅಪಾಯದ ಕುರಿತು ನಮಗೆ ಎಚ್ಚರಮೂಡಿಸುತ್ತದೆ.

ಸಾಮಾನ್ಯವಾಗಿ ಇಂಥ ವಸ್ತುವನ್ನು ಎತ್ತಿಕೊಂಡಾಗ ಕೊನೆಯನ್ನು ದುರಂತಗೊಳಿಸಿ ಮುಗಿಸುವ ಒಂದು ಜನಪ್ರಿಯ ಸೂತ್ರವಿದೆ. ಆದರೆ ಇಲ್ಲಿ ನಿರ್ದೇಶಕರು ಆ ಸೂತ್ರಕ್ಕೆ ಜೋತುಬಿದ್ದಿಲ್ಲ. ಕಥೆಯನ್ನು ದುರಂತಗೊಳಿಸುವುದಿಲ್ಲ. ಅದನ್ನೊಂದು ಅನುಭವವಾಗಿಸಿ ಮುಗಿಸುತ್ತಾರೆ. ಡ್ರೈಯರ್ ಒಳಗಿನ ಪುಟಾಣಿ ಸಾಯುವುದಿಲ್ಲ. ಮಕ್ಕಳೆಲ್ಲ ಗಾಬರಿಯಿಂದ ಅವಳನ್ನು ಹೊರಗೆಳೆದರೆ ಅವಳು ಆರಾಮವಾಗಿ ಎದ್ದು ಕೂಡುತ್ತಾಳೆ. ಕೊನೆಗೆ ಮಕ್ಕಳೆಲ್ಲ ಆ ಮನೆಯಿಂದ ಎದ್ದು ಹೊರಗಡೆ ಹೋಗುತ್ತಾರೆ. ಈ ಮುಕ್ತಾಯ ನಮಗೆ ಮಕ್ಕಳಾಟಿಕೆಯಲ್ಲಿ ಆಗಬಹುದಾದ ಅಪಾಯವನ್ನು ಕಾಣಿಸಿಯೂ ಕೊನೆಯಲ್ಲಿ ನೆಮ್ಮದಿಯ ನಿಟ್ಟುಸಿರು ಬಿಡುವ ಹಾಗೆ ಮಾಡುತ್ತದೆ.



**ಹೆಸರು:** ಡ್ರೈಯರ್
**ನಿರ್ದೇಶನ:** ಕಾನ್ನರ್ ಹರ್ಲಿ
**ನಿರ್ಮಾಣ:** ಮ್ಯಾಟ್ ಕ್ಯಾಂಪ್‌ಬೆಲ್
**ಛಾಯಾಗ್ರಹಣ:** ಪೀಟರ್ ಸ್ಟೀನ್‌ಲೋಫ್
**ತಾರಾಗಣ:** ಆವೇರಿ ಡೇನಿಯಲ್, ರಿನೀಸ್ ಡೇನಿಯಲ್, ಕ್ಲಾರ್ಕ್ ಫರ್ಲಾಂಗ್

ಈ ಕಿರುಚಿತ್ರ ವೀಕ್ಷಣೆಗೆ bit.ly/38W1Ixf ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.